# ಚಿತ್ರ ರೂಪಕಗಳು

ಹರಿದಾಸ ಪರಂಪರೆಯಲ್ಲಿ ಕಾವ್ಯ ರಚನೆ ಮಾಡಿದ ಅನೇಕ ಮಹಿಳೆಯರು ಇದ್ದಾರೆ. ಅದರಲ್ಲಿ ಹೆಳವನಕಟ್ಟೆ ಗಿರಿಯಮ್ಮ ಕೂಡ ಒಬ್ಬಳು. ಧಾರವಾಡ ಜಿಲ್ಲೆಯ ರಾಣಿಬೆನ್ನೂರು ಈಕೆಯ ಜನ್ಮ ಸ್ಥಳ. ಚಿಕ್ಕಂದಿನಲ್ಲೇ ಅನಾಥೆಯಾದ ಈಕೆ ಚಿಕ್ಕಪ್ಪನ ಆಶ್ರಯದಲ್ಲಿ ಬೆಳೆಯುತ್ತಾಳೆ. ಸುಮಾರು ಹತ್ತು, ಹನ್ನೊಂದನೇ ವಯಸ್ಸಿನಲ್ಲಿ ಮಲೆಬೆನ್ನೂರಿನ ಶಾನುಭೋಗ ಕೃಷ್ಣಪ್ಪನವರ ಮಗ ತಿಪ್ಪರಸನೊಂದಿಗೆ ಇವಳ ವಿವಾಹವಾಗುತ್ತದೆ. ಸಾಂಸಾರಿಕ ಜೀವನದಲ್ಲಿ ಆಸಕ್ತಿಯಿಲ್ಲದ ಈಕೆ ಹಿರಿಯರಿಗೆ ತಿಳಿಸಿ ಗಂಡನಿಗೆ ಮರುವಿವಾಹ ಮಾಡಿಸುತ್ತಾಳೆ. ಗೃಹ ಕಾರ್ಯಗಳನ್ನು ನಿರ್ವಹಿಸುತ್ತಲೇ ಹರಿನಾಮ ಸ್ಮರಣೆ ಮಾಡುತ್ತಾ ಸಾಹಿತ್ಯ ರಚನೆ ಮಾಡುತ್ತಾಳೆ.

ಬಹಳ ಹಿಂದೆ ಮಲೆಬೆನ್ನೂರಿನ ಸಮೀಪದಲ್ಲಿ ಇದ್ದ ದಿಬ್ಬದಲ್ಲಿ ಹೆಳವನೊಬ್ಬ ವಾಸಿಸುತ್ತಿದ್ದ. ದಿಬ್ಬದ ಪಕ್ಕದಲ್ಲಿನ ಹಳ್ಳಕ್ಕೆ ನೀರು ಕುಡಿಯಲು ದನಕರುಗಳ ಸಮೇತ ಗೊಲ್ಲರು ಬರುತ್ತಿದ್ದರು. ಹೆಳವ ಅವರಿಗೆ ದೇವರಕತೆ ಹೇಳುತ್ತಾ ಅವರ ಪ್ರೀತಿಗೆ ಪಾತ್ರನಾಗಿದ್ದ. ಮುಂದೊಂದು ದಿನ ಜನರ ನೆರವಿನಿಂದ ಕುಡಿಯುವ ನೀರು ಎಲ್ಲರಿಗೂ ಸಮೃದ್ಧವಾಗಿ ದೊರೆಯಲೆಂದು ಕೆರೆಯನ್ನು ಕಟ್ಟಿಸಿದ. ಈ ಕೆರೆಯೇ ಮುಂದೆ ಹೆಳವನು ಕಟ್ಟಿಸಿದ ಕೆರೆಯಾಗಿ ಮುಂದೊಂದು ದಿನ ಹೆಳವನಕಟ್ಟೆ ಆಯಿತು. ಹಸುವೊಂದು ಹುತ್ತಕ್ಕೆ ಹಾಲು ಸುರಿಸುತಿದ್ದ ಆ ಜಾಗವನ್ನು ಅಗೆದು ನೋಡಿದಾಗ ರಂಗನಾಥ ಸ್ವಾಮಿಯ ವಿಗ್ರಹ ದೊರೆತ ಪವಾಡ ನಡೆದು ಅಲ್ಲಿ ರಂಗನಾಥನ ಕ್ಷೇತ್ರವೊಂದು ಹುಟ್ಟಿಕೊಂಡಿತು. ಗಿರಿಯಮ್ಮನ ಅಂಕಿತ 'ಹೆಳವನಕಟ್ಟೆ ರಂಗ'. ಮುಂದೆ ಅವಳ ಹೆಸರು ಹೆಳವನಕಟ್ಟೆ ಗಿರಿಯಮ್ಮ ಎಂದೇ ಖ್ಯಾತವಾಯಿತು.

ಸುಮಾರು 18ನೆಯ ಶತಮಾನದ ಪೂರ್ವಾರ್ಧದಲ್ಲಿ ಇದ್ದಳೆಂದು ಗಿರಿಯಮ್ಮನ ಕಾಲವನ್ನು ಊಹಿಸಲಾಗುತ್ತದೆ. ಶರಣೆ ಅಕ್ಕಮಹಾದೇವಿಗೆ ಬಸವಾದಿ ಪ್ರಥಮರ ಆಶ್ರಯ, ಬೆಂಬಲವಿತ್ತು. ಸಂಚಿಹೊನ್ನಮ್ಮನಿಗೆ ಅರಸರ ರಾಜಾಶ್ರಯವಿತ್ತು. ಗಿರಿಯಮ್ಮ ವಿವಾಹಿತಳಾಗಿದ್ದರೂ ತನಗೆ ಒಲ್ಲದ ದಾಂಪತ್ಯದಿಂದ ಹೊರಬಂದೂ ಗೃಹಿಣಿಯಾಗಿಯೇ ಜೀವನವನ್ನು ನಡೆಸಿದಳು. ಸಾಮಾನ್ಯಳಾಗಿದ್ದರೂ ತನ್ನ ಪಾಂಡಿತ್ಯದಿಂದಲೇ ಕೃತಿ ರಚಿಸಿದವಳು. ಈಕೆ ಸುಮಾರು ಏಳು ಕಥನಾತ್ಮಕ ಕಾವ್ಯ ಪ್ರಸಂಗಗಳನ್ನು ಬರೆದಿದ್ದಾಳೆ. ಇವಳ ಕಾವ್ಯದಲ್ಲಿ ವಿಶೇಷವಾಗಿ ಕೊರವಂಜಿಯರು ಕಾಣಿಸಿಕೊಳ್ಳುತ್ತಾರೆ. ಬ್ರಹ್ಮ ಕೊರವಂಜಿಯಲ್ಲಿ ಬ್ರಹ್ಮನೇ ಕೊರವಂಜಿಯಾಗಿ, ಲವಕುಶರ ಕಾಳಗದಲ್ಲಿ ರಾಕ್ಷಸಿ ತಾಟಕಿಯೇ ಕೊರವಂಜಿಯಾಗಿ, ಕೃಷ್ಣ ಕೊರವಂಜಿಯಲ್ಲಿ ಕೃಷ್ಣನೇ ಕೊರವಂಜಿಯಾಗಿ ಕಾಣಿಸಿಕೊಳ್ಳುತ್ತಾರೆ. ಸಾಮಾನ್ಯವಾಗಿ ಈ ಕೊರವಂಜಿಯರು ನಿರ್ದಿಷ್ಟ ಕಾರ್ಯಸಾಧನೆಗಾಗಿ ಬಂದು ಅದು ಈಡೇರಿದ ನಂತರ ನಿರ್ಗಮಿಸುವವರು ಆಗಿರುತ್ತಾರೆ.

ಈಕೆ ಬರೆದ 'ಲವಕುಶರ ಕಾಳಗ'ದಲ್ಲಿ ರಾಮ, ಲಕ್ಷ್ಮಣನಿಂದ ತಿರಸ್ಕೃತಳಾಗಿ ಅವಮಾನಗೊಂಡ ತಾಟಕಿ ಸೀತೆಯನ್ನು ರಾಮನಿಂದ ದೂರಮಾಡಲೆಂದೇ ಕೊರವಂಜಿಯಾಗಿ ಸೀತೆಯ ಬಳಿ ಬರುತ್ತಾಳೆ. ದೇವಲೋಕದ ನಾಗಸಂಪಿಗೆಯನ್ನು ಕೊಡುಗೆಯಾಗಿ ತಂದ ಅವಳು ತಾನು ಸೀತೆಯ ಬಾಲ್ಯದ ಗೆಳತಿಯೆನ್ನುತ್ತಾಳೆ. ಈ ಮಾತನ್ನು ನಂಬದ ಸೀತೆ ಅವಳ ಮಾತಿನ ಮೋಡಿಗೆ ಒಳಗಾಗಿ ಪ್ರತಿಯಾಗಿ ಏನು ಉಡುಗೊರೆ ಕೊಡಲಿ ಎನ್ನುತ್ತಾಳೆ. ಅದಕ್ಕೆ ತಾಟಕಿ ರಾವಣನ ಚಿತ್ರವನ್ನು ಬರೆ ಎಂದು ಮುಂದುವರೆದು 'ಹೊನ್ನು ಹಣವನ್ನೊಲ್ಲೆ ಅನ್ನವಸ್ತ್ರವನ್ನೊಲ್ಲೆ, ನಿನ್ನ ಭಾಗ್ಯವ ನಾನೊಲ್ಲೆ, ಮುನ್ನಿನ ಅಸುರರೂಪ ಇನ್ನು ನೀ ಬರೆದರೆ, ಚೆನ್ನಾಗಿ ಹರಣ ಹೊರುವೆನು' ಎನ್ನುತ್ತಾಳೆ. ಸೀತೆ ತಾನು ಅಶೋಕ ವನದಲ್ಲಿದ್ದಾಗ ಕೇವಲ ರಾವಣನ ಉಂಗುಷ್ಠವನ್ನು ಮಾತ್ರ ನೋಡಿದ್ದೇನೆ, ತನ್ನಿಂದ ಬರೆಯಲಾಗದು ಎಂದು ನಿರಾಕರಿಸುತ್ತಾಳೆ. ತಾಟಕಿ ಮೊದಲು ಉಂಗುಷ್ಠ, ಮುಂದಕ್ಕೆ ಪಾದ, ಪಾದದ ನಂತರ ಮೊಣಕಾಲು, ಮೊಣಕಾಲ ಮೇಲೆ ನಡು, ನಡುವಿನ ಮೇಲೆ ಎದೆ, ಎದೆಯಮೇಲೆ ಭುಜ, ಭುಜದ ಮೇಲೆ ದಶಶಿರ ಬರೆ ಎಂದು ಕಾಡುತ್ತಾ ಚೆಂದದ ಕಾಗದ, ಲೆಕ್ಕಣಿಕೆಯನ್ನು ಸೀತೆಯ ಕೈಗೆ ಕೊಡುತ್ತಾಳೆ.

ಸೀತೆ ಒತ್ತಾಯಕ್ಕೆ ಮಣಿದು ಚಿತ್ರ ಬರೆದು 'ಅಳಿದು ಉಳಿಯದಿರು ಉಳಿದು ನೀ ಕೆಡದಿರು, ಧರಿಯವಳಗೆ ಅಡಗದಿರು, ಕಿರಿಯ ಲಕ್ಷಣದೇವ ಹೊಡೆದರೆ ಮಡಿ' ಎಂಬ ವರವ ನೀಡುತ್ತಾಳೆ. ವರವ ಪಡೆದ ಆ ಚಿತ್ರಪಟ ಯಾರ ಅಂಕೆಗೂ ಸಿಗದೆ ಎದ್ದೆದ್ದು ಕುಣಿಯಲಾರಂಭಿಸುತ್ತದೆ. ಮುಂಬರಲಿರುವ ದುರಂತವನ್ನು ಕುರಿತು ಗಿರಿಯಮ್ಮ ಹಗಲು ಇರುಳಾಯಿತು, ನೆಲಬಾಯಿ ಬಿಟ್ಟವು, ಧರೆ ಅಸ್ತಮಾನ ತೋರಿತು ಎಂಬಂತೆ ವರ್ಣಿಸುತ್ತಾಳೆ. ರಾಮ ಬರುವ ವೇಳೆಯಾದಾಗ 'ಶ್ರೀ ರಾಮರು ಬಂದರಾದರೆ ಎನ್ನ ಕುಂದು ನುಡಿವರೋ, ಬೈವರೋ, ಇಂದಿನ ವಿಧಿಯ ನಾ ಹೇಗೆ ಕಳೆಯಲೆಂದು' ಸೀತೆ ಮಂಚದ ಮೇಲೆ ಮಲಗಿ ಚಿಂತಿಸುತ್ತಾಳೆ. ಅಷ್ಟರಲ್ಲಿ ಬೇಟೆಯಿಂದ ಹಿಂತಿರುಗಿ ಬರುತ್ತಿರುವ ರಾಮ ಹಲವಾರು ಅಪಶಕುನಗಳನ್ನು ಬರುವ ಭವಿಷ್ಯದ ಮುನ್ಸೂಚನೆಯಾಗಿ ನೋಡುತ್ತಾನೆ. ಅರಮನೆಗೆ ಬಂದ ರಾಮನನ್ನು ಸೀತೆ ಅಳ್ಳೆದೆಯಿಂದಲೇ ಸ್ವಾಗತಿಸುತ್ತಾಳೆ.

ರಾವಣನ ಚಿತ್ರಪಟ ಬರೆದ ಸೀತೆ ತನಗೆ ತಾನೇ ಅಪರಾಧಿ ಪ್ರಜ್ಞೆಯಿಂದ ನರಳುತ್ತಾಳೆ. ಅಳುಕಿನಿಂದಲೇ ರಾಮನೊಂದಿಗೆ ಸಿಂಹಾಸನ ಹತ್ತಿದಾಗ ಅದು ಕತ್ತರಿಸಿ ತುಂಡಾಗಿ ಬೀಳುತ್ತದೆ. ರಾಮ ಹಾಸಿಗೆ ಸರಿಸಿ ನೋಡಿದಾಗ ಹತ್ತುತಲೆಯ ರಾವಣನ ಚಿತ್ರಪಟ ಕಂಡು ಅಚ್ಚರಿಯಿಂದ ನಸುನಗುತ್ತಾನೆ. ಈ ನಸುನಗು ಎಂಬ ಪದವನ್ನು ಗಿರಿಯಮ್ಮ ಪ್ರಜ್ಞಾಪೂರ್ವಕವಾಗಿಯೇ ಬಳಸಿದಂತೆ ತೋರುತ್ತದೆ. 'ಏಸುದಿವಸ ಗಾಸಿಯಾಗಿ ಬರೆದೆ ಇವನ, ಏಸುದಿವಸ ಭೋಗಿಸಿದೆ, ಮೋಸಮಾಡಿದೆ ಎನ್ನ ಕೂಡ, ನಿನ್ನ ಪ್ರಿಯನು ಎಂಬೋದುಂಟಾದರೆ ಹೊಂದಿಸಿ ಬಿಡುವೆನಿಬ್ಬರನು' ಎಂದೆನ್ನುತ್ತಾನೆ ರಾಮ. ಅಷ್ಟರಲ್ಲಿ ರಾಮ ಕೊಲ್ಲಲಾಗದ ಚಿತ್ರಪಟವನ್ನು ಲಕ್ಷ್ಮಣ ಕೊಂದು ತಂದು ರಾಮನಿಗೆ ಒಪ್ಪಿಸುತ್ತಾನೆ. ಮುಂದೆ ಮೂಲ ರಾಮಾಯಣದಲ್ಲಿ ಬರುವಂತೆ ಸೀತಾಪರಿತ್ಯಾಗ ಪ್ರಸಂಗ ಬರುತ್ತದೆ.

ಜಾನಪದ ರಾಮಾಯಣಗಳಲ್ಲಿಯೂ ಚಿತ್ರಪಟದ ಪ್ರಸಂಗ ಇವೆ. ಒಟ್ಟಿನಲ್ಲಿ ಈ ಎಲ್ಲಾ ನಂಬಿಕೆಗಳು, ಐತಿಹ್ಯಗಳು ರಾಜ, ರಾಣಿಯರ ಬದುಕೂ ಸಹ ಸಾಮಾನ್ಯರಿಗಿಂತ ಭಿನ್ನವೇನಲ್ಲ. ಅಲ್ಲಿಯೂ ಸಹ ಸಂಶಯ, ಅಪನಂಬಿಕೆ, ಅತೃಪ್ತಿಯ ದಾಂಪತ್ಯದಲ್ಲಿ ಅಡಗಲೆತ್ನಿಸುವ ಸಂಬಂಧಗಳು ಸದಾ ಜಾಗೃತವಾಗಿರುತ್ತವೆ ಎಂಬುದನ್ನು ನಾವು ಒಪ್ಪಲೇಬೇಕಾಗುತ್ತದೆ. ಹೆಣ್ಣಿನ ಮನಸ್ಸಿನ ವಾಂಛೆಗಳನ್ನು ಅರಿಯುವಲ್ಲಿ ನವೀಕರಣಗೊಳ್ಳದ ಆಧುನಿಕ ಕಾಲದ ಚಿಂತನೆಗಳಲ್ಲಿರುವ ತೊಡಕುಗಳು ಸಹ ಇದಕ್ಕೆ ಕಾರಣವಾಗಿವೆ. ಕಾಲ, ದೇಶ, ಸಂದರ್ಭಗಳು ಬೇರೆಯಾದರೂ ಮಂಚದಲ್ಲಿ ಅಡಗಿ, ತಲೆಯೆತ್ತಲೆತ್ನಿಸುವ ಚಿತ್ರಪಟಗಳು ಹಾಗೂ ಪತ್ನಿಧರ್ಮ ಪರೀಕ್ಷಕರು ಬದಲಾಗುವುದಿಲ್ಲವಲ್ಲ.

■ **ಅಮೃತಮತಿ**

## ಮಾತೇ ಮುತ್ತು

- ಗಟ್ಟಿ ಯಾವುದು, ಜೊಳ್ಳು ಯಾವುದು ಎಂಬುದನ್ನು ತಿಳಿದು ಶಾಶ್ವತವಾದ ಸತ್ಯವನ್ನು ಹುಡುಕುವುದು ನಮ್ಮ ಧರ್ಮವಾಗಬೇಕು.
  —ಬಿ.ಎಂ.ಶ್ರೀ
- ಕೆಟ್ಟದ್ದನ್ನು ಮಾಡಲೇಬೇಕೆಂದವನಿಗೆ ಅವಕಾಶದ ಕೊರತೆ ಇರದು.
  —ಪಿ. ಸೈರಸ್
- ವಿವೇಕಿಯಾದವನು ಬೇರೆಯವರ ತಪ್ಪನ್ನು ಕಂಡು ತನ್ನಲ್ಲಿರುವ ತಪ್ಪನ್ನು ತಿದ್ದಿಕೊಳ್ಳುತ್ತಾನೆ.
  —ಸ್ವಾಮಿ ವಿವೇಕಾನಂದ
- ಇನ್ನೊಬ್ಬರ ಹುಚ್ಚುತನ ನಮಗೆ ಕಾಣಿಸುವಷ್ಟು ಸುಲಭವಾಗಿ ನಮ್ಮ ಹುಚ್ಚುತನ ಕಾಣಿಸದು.
  —ಶಿವರಾಮ ಕಾರಂತ
- ಸತ್ಯದ ಜೊತೆ ಬದುಕುವವನು ಯಾರಿಗೂ ಹೆದರಬೇಕಾಗಿಲ್ಲ.
  —ಸಾಕ್ರೆಟಿಸ್
- ಹಸಿದವರಿಗೆ ನಮ್ಮಿಂದ ಊಟ ಹಾಕಲು ಆಗದಿದ್ದಾಗ, ಊಟ ಹಾಕುವವರ ಮನೆಯನ್ನಾದರೂ ತೋರಿಸಬೇಕು.
  ಗಳಗನಾಥ